ನಂ 3221/25
7/7/25

**"ಇ-ಮೇಲ್ ಮುಖಾಂತರ ಮಾತ್ರ"**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉತ್ತರಕನ್ನಡ, ಕಾರವಾರ**

**ದಿನಾಂಕಃ** 07/07/2025

**ಮುಂದುವರೆದ ಸುತ್ತೋಲೆ**

ಉತ್ತರ ಕನ್ನಡ ನ್ಯಾಯಾಂಗ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಿಪಿಕ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಭಾಗ-4 ಪುನರ್ ಅವಲೋಕನೆ (Review) ಮತ್ತು ಭಾಗ-5 ಅಂಗೀಕಾರ (Acceptance) ಇವುಗಳನ್ನು ಪರಿಗಣಿಸುವಾಗ ಕೆಲವು ಪೀಠಾಸೀನಾಧಿಕಾರಿಗಳು ಮಾಡಿರುವ ತಪ್ಪುಗಳು ಗಮನಕ್ಕೆ ಬಂದು ಆ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈ ಕಛೇರಿಯಿಂದ ಸುತ್ತೋಲೆ ದಿನಾಂಕಃ 10/06/2025 ನ್ನು ಹೊರಡಿಸಿದ್ದು ಇರುತ್ತದೆ. ಅದೇ ಪ್ರಕಾರ ಅನೇಕ ಪೀಠಾಸೀನಾಧಿಕಾರಿಗಳು ಕಾರ್ಯನಿರ್ವಹಣಾ ವರದಿಗಳನ್ನು ಬರೆಯುವಾಗ ಅವರ ಹೆಸರು ಪದನಾಮ ಮತ್ತು ಸ್ಥಳ ನಮೂದಿಸದೇ ಇರುವುದರಿಂದ ಆ ವರದಿಗಳು ಯಾವ ನ್ಯಾಯಾಲಯದಿಂದ ಬಂದಿದೆ ಎಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಸದರಿ ಸುತ್ತೋಲೆಗೆ ಈ ಕೆಳಗಿನ ಅಂಶವನ್ನು ಸಹ ಸೇರಿಸಿಕೊಳ್ಳುವಂತೆ ನಿರ್ದೇಶಿಸಲಾಗಿದೆ.

5. ಭಾಗ-3 ವರದಿ (Report)ನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಒಪ್ಪಿಸುವಾಗ ಪೀಠಾಸೀನಾಧಿಕಾರಿಗಳ ಸಹಿ ಇರುವ ಸ್ಥಳದಲ್ಲಿ ಹೆಸರು ಮತ್ತು ಹುದ್ದೆಯ ಬಗ್ಗೆಯು ಉಲ್ಲೇಖವಿದ್ದು ವರದಿ ಮಾಡುವ ಅಧಿಕಾರಿಗಳು ತಮ್ಮ ಹೆಸರು ಮತ್ತು ಹುದ್ದೆಯ ಮೊಹರನ್ನು ಕಡ್ಡಾಯವಾಗಿ ನಮೂದಿಸುವಂತೆ ಕ್ರಮವಹಿಸುವುದು.

ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ನಮೂದಿಸುವಾಗ ಈ ಕಛೇರಿ ಸುತ್ತೋಲೆ ದಿನಾಂಕಃ **10/06/2025** ಕ್ಕೆ ಈ ಮೇಲಿನ ಅಂಶವನ್ನು ಸಹ ಸೇರ್ಪಡೆಗೊಳಿಸಿಕೊಂಡು ವರದಿಗಳನ್ನು ನಮೂದಿಸಲು ಕ್ರಮಕೈಗೊಳ್ಳಲು ಈ ಮೂಲಕ ನಿರ್ದೇಶಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ.

1. ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,(ಶಿರಸಿ ಪೀಠ)
2. ಹಿರಿಯ ಸಿವಿಲ್ ನ್ಯಾಯಾಧೀಶರು, ಕಾರವಾರ/ಅಂಕೋಲಾ/ಕುಮಟಾ/ಹೊನ್ನಾವರ/ಭಟ್ಕಳ/ಶಿರಸಿ/ಯಲ್ಲಾಪುರ/ಹಳಿಯಾಳ.
3. ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಕಾರವಾರ/ಅಂಕೋಲಾ/ಕುಮಟಾ/ಹೊನ್ನಾವರ/ಭಟ್ಕಳ/ಶಿರಸಿ/ಸಿದ್ದಾಪುರ/ಯಲ್ಲಾಪುರ/ಹಳಿಯಾಳ/ದಾಂಡೇಲಿ/ಮುಂಡಗೋಡ.